# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

## ಸಿ.ಸಿ. ನಂ. 1946/2025

ಸಿ.ಡಬ್ಲ್ಯು 9
ಪಿ.ಡಬ್ಲ್ಯು 5

| | | |
|---|---|---|
| ಸಾಕ್ಷಿದಾರರ ಹೆಸರು | – | ಡಾ. ಅಪೂರ್ವ ನಾಯ್ಕ |
| ತಂದೆಯ ಹೆಸರು | – | ಮಂಜುನಾಥ |
| ವಯಸ್ಸು | – | 35 ವರ್ಷ |
| ಉದ್ಯೋಗ | – | ವೈದ್ಯಾಧಿಕಾರಿಗಳು ಕಿಮ್ಸ್, ಕಾರವಾರ |
| ವಾಸ್ತವ್ಯ | – | ಕಾರವಾರ |

(ಇಂದು ದಿನಾಂಕಃ 15–07–2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ನಾನು 2021 ರಿಂದ ಇಲ್ಲಿಯವರೆಗೂ ಅರವಳಿಕೆ ತಜ್ಞರೆಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 20–02–2025 ರಂದು ಸಂಜೆ 5–30 ಗಂಟೆಗೆ ಚಾಸಾ 1 ಇವರನ್ನು ಹಲ್ಲೆಯ ಹಿನ್ನೆಲೆಯಲ್ಲಿ ಪರೀಕ್ಷಿಸಿದ್ದೇನೆ. ತಲೆಯ ಎಡಭಾಗದಲ್ಲಿ ಹರಿದ ಗಾಯ 5X.5X.2 ಸೆಂ ಮೀಟರ್. ಸದರಿ ಗಾಯ ಸಾದಾ ಸ್ವರೂಪದಾಗಿದ್ದು ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಸದರಿ ದಾಖಲಾತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ–4 ಎಂದು, ಸಾಕ್ಷಿಯ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು . ಮೇಲೆ ಹೇಳಿದ ಗಾಯ ಕಬ್ಬಿಣ ಸರಳಿನಿಂದ ಹೊಡೆದರೆ ಆಗುವ ಸಾಧ್ಯತೆ ಇದೆ ಎಂದು ಅಭಿಪ್ರಾಯ ಕೊಟ್ಟಿದ್ದೇನೆ. ಸದರಿ ಅಭಿಪ್ರಾಯನ್ನು ನಿಪಿ–5 ಎಂದು, ಸಾಕ್ಷಿಯ ಸಹಿಯನ್ನು ನಿಪಿ–5(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಎ ಎ ವಕೀಲರಿಂದಃ**

C.W.9 P.W.5

ಸಾಮಾನ್ಯವಾಗಿ ಚೂಪಾದ ವಸ್ತು ತಲೆಗೆ ತಾಗಿದಾಗ ಮೇಲೆ ಹೇಳಿದ ಗಾಯ ಆಗುವ ಸಾಧ್ಯತೆ ಇದೆ ಎಂದರೆ ಸರಿ . ಸಾಮಾನ್ಯವಾಗಿ ಆಯ ತಪ್ಪಿ ಬಿದ್ದಾಗ ಮೇಲೆ ಹೇಳುವ ಗಾಯ ಆಗುವ ಸಾಧ್ಯತೆ ಇದೆ ಎಂದರೆ ಸರಿ .

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ